# ಹೂ ಕೊಯ್ಯುವುದು

ಎಲೆಗಳ ತಲೆಯ ಮೇಲೆ ತೊನೆದಾಡುವ
ಈ ಹೂ ಕೊಯ್ಯುವುದು
ಸುಲಭದ ಮಾತಲ್ಲ
ಬೇಕು ಒಂದಿಷ್ಟು ಕಸರತ್ತು

ಅಖಂಡ ಮೌನದಿ ಎಲ್ಲರೆದೆಗೆ
ತಂಪೆರೆಯಲೆಂದೆ
ಬುದ್ಧ ಮುಡಿದ ನಿರ್ಲಿಪ್ತ ಹೂ
ಕೊಯ್ಯುವುದು

ಸುಲಭವಲ್ಲ...

ಗುಡಿಯೊಳಗೆ ಕೂತ
ಶಿವನಿಗೋ, ಅವನ ಸಿರಿಮುಡಿಗೋ
ಭಕ್ತಗಣಗಳು ಹೂವಿನ
ಭಂಡಾರವನ್ನೆ ತೊಡಿಸಿದರೂ
ಮನದಂಗಳದಿ ಮೂಡಿದ
ಶಿವನ ದಿವ್ಯ ಜ್ಞಾನದ ಹೂ
ಕೊಯ್ಯುವುದು

ಸುಲಭವಲ್ಲ...

ಅಜ್ಞಾತದ ಕಡಲಲ್ಲಿ ಈಜುತ್ತಾ
ಆತ್ಮದ ಕುರುಡು ಕಳೆದು
ತಿಳಿವಿನ ವಿವೇಕದ ಹೂ
ಕೊಯ್ಯುವುದು

ಸುಲಭವಲ್ಲ...

ನುಣುಪು ಮೈದೊಗಲ
ಹಾಗೇ ಮೆತ್ತಗೆ ಹಿಡಿದು ನಾಜೂಕಿನಲಿ
ಕೈ ಬೆರಳ ವಿಷಮತೆಗೆ ನಲುಗದಂತೆ
ದಳವೆನಿತೂ ನೋಯದಂತೆ



ಅರ್ಧ ತೊಟ್ಟು ಮುರಿಯದಂತೆ
ಕಿತ್ತು ತರುವುದು...
ಎದೆಗರ್ಭದೊಳಗೆ ಮಾಲೆ ಕಟ್ಟುವುದು

ಸುಲಭವಲ್ಲ...

ಅಜಾಗ್ರತೆಯ ಅಂಗಡಿಯಲ್ಲಿ
ಬಿಕರಿಗಿಟ್ಟ ಮನಸ್ಸು ಹೂವ ಹಿಡಿಯಿತೆಂದರೆ
ಪಕಳೆ ಕಿತ್ತು, ಇಲ್ಲ ದಳ ಮುರಿದು
ಹೂ, ತಾಸೊತ್ತಿಗೆ ಕಮರಿ ಬಣ್ಣಗೇಡಿಯಾಗಿ

ತ್ಯಾಜ್ಯವಾಗುವುದು ಇಲ್ಲವೇ
ಒಣಗಾಳಿಗೆ
ನೆಲೆತಪ್ಪಿ ಅಲೆದಾಡುವುದು

● **ನಾಗರೇಖಾ ಗಾಂವಕರ**

ಕಲೆ: ವಾಗೀಶ ಹೆಗಡೆ

